ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಅಲ್ಲಿರುವ ವೈದ್ಯರುಗಳ ಸಂಖ್ಯೆ ಎಷ್ಟೆಂದರೆ 'ಒಂದಿದೆ' ಎಂದು ಹೇಳಿದ್ದಾರೆ. ಇನ್ನು ಇಬ್ಬರು ವೈದ್ಯರುಗಳು ಬೇಕು. ಸ್ವಾಮಿ ಈ ಇಬ್ಬರು ವೈದ್ಯರುಗಳನ್ನು ಯಾವಾಗ ಕೊಡುತ್ತೀರಿ ಎನ್ನುವುದಕ್ಕೆ ಸ್ಪಷ್ಟವಾದ ತಮ್ಮ ನಿಲುವನ್ನು ಹೇಳಿ. ಎರಡನೆಯದು ಶಹಾಬಾದ್‌ನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಒಂದು ಆಂಬುಲೆನ್ಸ್ ಕೊಡುತ್ತೀರಾ ಎಂದು ಕೇಳಿರುವುದಕ್ಕೆ ಆಂಬುಲೆನ್ಸ್ ಕೊಡಲಿಕ್ಕೆ ಜಿಲ್ಲಾ ಪರಿಷತ್ತು ಗುಲ್ಬರ್ಗಾದವರಿಗೆ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಆಗುವುದಿಲ್ಲ. ಆಂಬುಲೆನ್ಸ್‌ನ್ನು ಎಷ್ಟು ದಿವಸಗಳಲ್ಲಿ ಕೊಡುತ್ತೀರಿ. ಅದರ ಬಗ್ಗೆ ಖಚಿತವಾಗಿ ಹೇಳಬೇಕು. ಮತ್ತೆ ಇನ್ನು ಇಬ್ಬರು ಡಾಕ್ಟರುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಎಷ್ಟು ದಿವಸಗಳಲ್ಲಿ ಕೊಡುತ್ತೀರಿ ? ಮೂರನೆಯದಾಗಿ ಗುಲ್ಬರ್ಗಾ, ಹೈದರಾಬಾದ್ – ಕರ್ನಾಟಕ ಭಾಗದ ಡಾಕ್ಟರುಗಳನ್ನೇ ಕೊಡಿ. ಈ ಭಾಗದವರು ಕೊಟ್ಟರೆ ಅವರು 10 ದಿವಸಗಳಲ್ಲಿಯೇ ಟ್ರಾನ್ಸ್‌ಫರ್ ಆಗುತ್ತಾರೆ. ಆದ್ದರಿಂದ ಈ ಮೂರು ಪ್ರಶ್ನೆಗಳಿಗೂ ನೇರವಾದ ಸ್ಪಷ್ಟವಾದ ಉತ್ತರವನ್ನು ಕೊಡಿ. ಇಷ್ಟು ದಿವಸಗಳಲ್ಲಿ ಕೊಡುತ್ತೇವೆನ್ನುವ ಮಾತನ್ನು ಖಚಿತವಾಗಿ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಶಹಾಬಾದ್ ಆಸ್ಪತ್ರೆ ಕಟ್ಟಡದ ಕೆಲಸ ಪೂರ್ತಿ ಆಗಿಲ್ಲ. ಆದಷ್ಟು ಬೇಗ ಈ ಆಸ್ಪತ್ರೆಗೆ ಇಬ್ಬರು ವೈದ್ಯರುಗಳನ್ನು ನೇಮಕ ಮಾಡುತ್ತೇವೆ. ಅದೇ ರೀತಿ ಆಂಬ್ಯುಲೆನ್ಸ್ ಕೇಳಿದ್ದಾರೆ. ಇದರ ಬಗ್ಗೆ ಜಿಲ್ಲಾ ಪರಿಷತ್ತಿನಿಂದ ಸರಕಾರಕ್ಕೆ ಪ್ರಪೊಸಲ್ ಬರಬೇಕು, ಅವರ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಬೇಕು, ಆಗ ಮಾತ್ರ ನಾವು ಮಂಜೂರು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಾಬುರಾವ್ ಚವಾಣ್:– ಆಸ್ಪತ್ರೆ ಕಟ್ಟಡ ನಾವು ಕೊಡುತ್ತೇವೆ. ಅಲ್ಲಿ ಸಮಸ್ಯೆ ಬಹಳ ಇದೆ. ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮೊದಲು ಮಾಡಿ. ಆ ಭಾಗದ ಡಾಕ್ಟರುಗಳನ್ನು ಕೊಡುವ ವ್ಯವಸ್ಥೆ ಮಾಡಿ, ತಾವು ನೇರವಾಗಿ ಉತ್ತರ ಹೇಳುತ್ತಿಲ್ಲ, ಆಂಬುಲೆನ್ಸ್ ಕೊಡಬೇಕೆಂದು ತಾವು ಡೈರೆಕ್ಷನ್ ಕೊಟ್ಟರೆ ಅವರು ಕೊಡುತ್ತಾರೆ. ಪ್ರಪೋಸಲ್ಸ್ ಕೊಡಬೇಕೆಂದರೆ ಆಗುವುದಿಲ್ಲ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಮಾನ್ಯ ಅಧ್ಯಕ್ಷರೆ, ಈ ಆಸ್ಪತ್ರೆ ಜಿಲ್ಲಾ ಪರಿಷತ್ತಿನ ಅಧೀನದಲ್ಲಿದೆ, ಸರ್ಕಾರದ ಅಧೀನದಲ್ಲಿ ಇಲ್ಲ. ಅವರು ಆಂಬುಲೆನ್ಸ್ ಬೇಕೆಂದು ಪ್ರಪೋಸಲ್ ಮಾಡಿ ಸರ್ಕಾರಕ್ಕೆ ಮಂಜೂರಾತಿ ನೀಡುತ್ತದೆ. ಜಿಲ್ಲಾ ಪರಿಷತ್‌ನವರು ಆಂಬ್ಯುಲೆನ್ಸ್ ಬೇಕೆಂದು ಹೇಳಿ ಬಜೆಟ್ ಪ್ರಾವಿಷನ್ ಮಾಡಿ ಸರ್ಕಾರಕ್ಕೆ ಕಳುಹಿಸಿದರೆ ಸರ್ಕಾರ ಅದಕ್ಕೆ ಮಂಜೂರಾತಿಯನ್ನು ನೀಡುತ್ತದೆ. ಡಾಕ್ಟರುಗಳನ್ನು ಎಷ್ಟ ದಿವಸಗಳಲ್ಲಿ ಕೊಡುತ್ತೀರೆನ್ನುವ ಮಾತನ್ನು ಕೇಳುತ್ತಿದ್ದಾರೆ.....

ಅಧ್ಯಕ್ಷರು:– ಮಾನ್ಯ ಚೌವಾಣ್‌ರವರೇ ಮಾನ್ಯ ಸಚಿವರು ಉತ್ತರವನ್ನು ಈಗಾಗಲೇ ಹೇಳಿದ್ದಾರೆ ತಾವು ಕುಳಿತುಕೊಳ್ಳಿ.

ಧಾರವಾಡ ಜಿಲ್ಲೆಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಖಾಲಿ ಹುದ್ದೆಗಳು

108 (324) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ):-

ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಸರ್ಕಾರದಿಂದ ಮಂಜೂರಾತಿಗಾಗಿ ಕಳುಹಿಸಲಾಗಿದೆ;

ಆ) ಇವುಗಳ ಪೈಕಿ ಎಷ್ಟು ಹುದ್ದೆಗಳಿಗೆ ಸರ್ಕಾರವು ಮಂಜೂರಾತಿ ನೀಡಿರುವುದು;

೫) ಮಂಜೂರಾತಿ ನೀಡದೇ ಇರತಕ್ಕ ಹುದ್ದೆಗಳ ವಿವರ ಹಾಗೂ ನೀಡದೆ ಇರಲು ಕಾರಣಗಳನ್ನು ತಿಳಿಸುವುದು ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಶಿಕ್ಷಣ ಸಚಿವರು):–

ಅ) ಪ್ರೌಢಶಾಲೆಗಳು – 226
ಪ್ರಾಥಮಿಕ ಶಾಲೆಗಳು – 50
ಪದವಿ-ಪೂರ್ವಕಾಲೇಜು – 23
ತಾಂತ್ರಿಕ ಕಾಲೇಜು – 01
ಒಟ್ಟು – 300

ಆ) ಒಟ್ಟು 162
ಪ್ರೌಢಶಾಲೆ – 122
ಪ್ರಾಥಮಿಕ ಶಾಲೆ – 13
ಪದವಿ-ಪೂರ್ವ ಕಾಲೇಜು – 17
ತಾಂತ್ರಿಕ ಕಾಲೇಜು – 10

ಇ) ಒಟ್ಟು 151
ಪ್ರೌಢಶಾಲಾ ಹುದ್ದೆಗಳು – 104
ಪ್ರಾಥಮಿಕ ಶಾಲೆ ಹುದ್ದೆಗಳು – 27
ಪದವಿ-ಪೂರ್ವ ಕಾಲೇಜು – 06
ತಾಂತ್ರಿಕ ಕಾಲೇಜು – 04

ಸರ್ಕಾರದಲ್ಲಿ ಆರ್ಥಿಕ ಮಿತವ್ಯಯ ಆದೇಶ ಜಾರಿಯಲ್ಲಿದ್ದು ಬಡ್ತಿಯಿಂದ ಹಾಗೂ ವರ್ಗಾವಣೆಯಿಂದ ತೆರವಾದ ಹುದ್ದೆಗಳನ್ನು ತುಂಬಲು ಅವಕಾಶವಿಲ್ಲದ ಕಾರಣ ಈ ಹುದ್ದೆಗಳನ್ನು ತುಂಬಲು ಸಾಧ್ಯವಾಗಿಲ್ಲ.

ಶ್ರೀ ಪಿ.ಸಿ. ಸಿದ್ದನಗೌಡರ್:– ಸನ್ಮಾನ್ಯ ಅಧ್ಯಕ್ಷರೆ ಎಜುಕೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಅಪ್ರೂವಲ್ ತೆಗೆದುಕೊಳ್ಳಬೇಕಾದರೆ ಬಹಳ ತಲೆನೋವು. ಉಳಿದ ಜಾಗಗಳನ್ನು ತುಂಬಲು ಎಷ್ಟು ದಿವಸಗಳಲ್ಲಿ ಮಂಜೂರಾತಿಯನ್ನು ಕೊಡುತ್ತೀರೆಂದು ಕೇಳುತ್ತಿದ್ದೇನೆ.

ಎರಡನೆಯದಾಗಿ, ಅನುದಾನ ಪಡೆಯತಕ್ಕ ಸಂಸ್ಥೆಗಳಿಗೆ ಮಂಜೂರಾತಿ ನೀಡುವಲ್ಲಿ ವಿಳಂಬ ಮಾಡುವುದರಿಂದ ಗ್ರಾಮಾಂತರ ಪ್ರದೇಶಗಳ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದಷ್ಟು ಉಳಿದಂತೆ ಹುದ್ದೆಗಳನ್ನು ತೀವ್ರಗತಿಯಲ್ಲಿ ಕೊಡಬೇಕೆಂದು ಒತ್ತಾಯಿಸುತ್ತೇನೆ. ವರ್ಗಾವಣೆ ವಿಚಾರದಲ್ಲಿ ಹೇಳುವುದಾದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶಿಕ್ಷಕರನ್ನು ವರ್ಗಾವಣೆ ಮಾಡುತ್ತಾರೆಂದು ಉತ್ತರ ಕೊಟ್ಟಿದ್ದಾರೆ. ನನ್ನ ತಿಳುವಳಿಕೆ ಪ್ರಕಾರ ಆ ಉತ್ತರ ಸರಿಯಲ್ಲ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಾವಣೆ ಬಹುತೇಕ ಆಗುವುದಿಲ್ಲ. ಇದರ ಬಗ್ಗೆ ಕೂಡ ತಾವು ಹೇಳಬೇಕು.

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಶಾಸಕರ ಕಳವಳ ಅರ್ಥವಾಗುತ್ತದೆ. ಹಳ್ಳಿಯ ಶಾಲೆಗಳಲ್ಲಿ ಅಧ್ಯಾಪಕರು ಇಲ್ಲವೆಂದರೆ ಆ ಶಾಲೆ ಇರುವುದರಿಂದಲೂ ಉಪಯೋಗವಾಗುವುದಿಲ್ಲ. ಆ ಶಾಲೆಗಳಿಗೆ ಅಧ್ಯಾಪಕರನ್ನು ಕೊಡಬೇಕಾಗುತ್ತದೆ. ಈಗಾಗಲೇ ಸಾಕಷ್ಟು ಅಧ್ಯಾಪಕರನ್ನು ನೇಮಿಸಿಕೊಂಡಿದ್ದೇವೆ. ಮುಂದಿನ ಏಪ್ರಿಲ್–ಮೇ ತಿಂಗಳಲ್ಲಿ 6812 ಮಂದಿ ಅಧ್ಯಾಪಕರನ್ನು ನೇಮಕ ಮಾಡುತ್ತಿದ್ದೇವೆ. ಹೈಸ್ಕೂಲ್‌ನಲ್ಲೂ ಮತ್ತು ಪ್ರೈಮರಿ ಶಾಲೆಗಳಲ್ಲೂ ಮಾಡುತ್ತಿದ್ದೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

ವರ್ಗಾವಣೆ ಆಗುವುದಿಲ್ಲವೆಂದು ಹೇಳುತ್ತಿದ್ದೀರಿ. ಅಲ್ಲಿಯೂ ಕೂಡ ವರ್ಗಾವಣೆ ಆಗುತ್ತವೆ. ಏಕೆಂದರೆ ಒಂದು ಸಂಸ್ಥೆಯಿಂದ ಮತ್ತೊಂದು ಸಂಸ್ಥೆಗೆ ಅವರು ಬೇಕೆಂದು ಕೇಳುತ್ತಾರೆ. ಆಗ ಅವರು ಒಪ್ಪಿಗೆ ಕೊಡುತ್ತಾರೆ, ಅವರನ್ನು ತೆಗೆದುಕೊಳ್ಳುತ್ತಾರೆ. ಇಂಥ ಸ್ಥಾನಗಳು ಕೂಡ ಖಾಲಿ ಆಗುತ್ತವೆ. ಅವುಗಳನ್ನು ಇದುವರೆಗೆ ತುಂಬಿಲ್ಲ. ಮರಣದಿಂದ ಖಾಲಿಯಾದ ಸ್ಥಾನಗಳನ್ನು ತುಂಬಿದ್ದೇವೆ. ಉಳಿದದ್ದನ್ನು ತುಂಬುತ್ತೇವೆ. ರಾಜೀನಾಮೆ ಕೊಟ್ಟದ್ದರಿಂದ ಖಾಲಿಯಾದ ಸ್ಥಾನಗಳನ್ನು ತುಂಬುತ್ತೇವೆ. ಕೆಲವನ್ನು ಈಗಾಗಲೇ ತುಂಬಿದ್ದೇವೆ. ತಾವು ಬಹಳಷ್ಟು ಶಾಲೆಗಳಲ್ಲಿ ಅಧ್ಯಾಪಕರ ಹುದ್ದೆಗಳು ಖಾಲಿ ಇವೆ ಎಂದು ಹೇಳಿದ್ದೀರಿ, ಅವನ್ನು ತುಂಬುತ್ತೇವೆ. ಖಾಸಗಿ ಪ್ರೌಢಶಾಲೆಗಳಿಗೆ ಅನುದಾನ ಮಂಜೂರಾತಿ ಕೊಡುವುದರ ಬಗ್ಗೆ ಕೇಳಿದ್ದೀರಿ. ಮಂಜೂರಾತಿಯನ್ನು ಆದಷ್ಟು ಬೇಗ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದಷ್ಟು ಬೇಗನೆ ಎಂಬ ಶಬ್ದವನ್ನು ನಾನು ಬಹಳ ತೂಕದಿಂದ ಉಪಯೋಗ ಮಾಡುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಂತ್ರಿಮಂಡಲದಲ್ಲಿ ಬೇರೆಯವರು ಆ ಶಬ್ದವನ್ನು ತೂಕದಿಂದ ಉಪಯೋಗಿಸುವುದಿಲ್ಲವೆ ?

ಡಾ।। ಹೆಗ್ಗಪ್ಪ ಡಿ. ಲಮಾಣಿ:– ಅದು ಅವರವರಿಗೆ ಸಂಬಂಧಪಟ್ಟಿದ್ದುದು. ಇದು ನನಗೆ ಸಂಬಂಧಪಟ್ಟಿದ್ದುದು. ನಾನು ತೂಕದಿಂದ ಆದಷ್ಟು ಬೇಗ ಅಂದರೆ ಬೇಗನೆ ಎಂದು ಹೇಳುತ್ತಿದ್ದೇನೆ. ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೋದಾಗ ಹೊಸ ಅಧ್ಯಾಪಕರನ್ನು ಕಾಣುತ್ತೀರಿ.

ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಕೊರತೆ

109 (1046) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):-

ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಹಾಗಿದ್ದಲ್ಲಿ ಈ ಕೊರತೆ ನಿವಾರಣೆಗೆ ಸರ್ಕಾರವು ಕೈಗೊಂಡ ಕ್ರಮವೇನು;

ಇ) ಅನೇಕ ಗ್ರಾಮಾಂತರ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳಲ್ಲಿ ಕಟ್ಟಡದ ಸೌಲಭ್ಯವಿಲ್ಲದೇ ಹಾಗೂ ಸಾಕಷ್ಟು ಕೊಠಡಿಗಳ ಕೊರತೆಯಿರುವುದನ್ನು ಸರ್ಕಾರ ಗಮನಿಸಿದೆಯೇ;

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಮನಗಂಡಿದೆ

ಆ) ಖಾಲಿಯಿರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಪೈಕಿ 1356 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ. ಇನ್ನು 6812 ಹುದ್ದೆಗಳನ್ನು ವಿಶೇಷ ನಿಯಮಾವಳಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ತೆರವಿರುವ 1405 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳನುಸಾರ ಬರುವ ಶೈಕ್ಷಣಿಕ ವರ್ಷದ ಪ್ರಾರಂಭದೊಳಗೆ ಭರ್ತಿ ಮಾಡಲು ಎಲ್ಲಾ ಪ್ರಯತ್ನ ಮಾಡಲಾಗುವುದು.

ಇ) ಗಮನಿಸಿದೆ.

ಶ್ರೀ ಎಂ.ಎಸ್. ಆತ್ಮಾನಂದ:– ಮಾನ್ಯ ಸಚಿವರ ಉತ್ತರದ ಪ್ರಕಾರ ಪ್ರಾಥಮಿಕ ಶಾಲಾ ಶಿಕ್ಷಕರ